


‘ನೀನು ಓದಬೇಕೆಂದುಕೊಳ್ಳುವ ಪುಸ್ತಕ ಇಲ್ಲದಿದ್ದರೆ ನೀನೇ ಆ ಪುಸ್ತಕ ಬರೆ’ ಎಂದ ಅಮೆರಿಕದ ಲೇಖಕಿ ಟೋನಿ ಮಾರಿಸನ್ (1931–2019) ತನ್ನನ್ನು ಆಫ್ರಿಕನ್ ಅಮೆರಿಕನ್ ಲೇಖಕಿ ಎಂದೇ ಗುರುತಿಸಿಕೊಂಡವರು. ಅಮೆರಿಕೆಯಲ್ಲಿನ ಜನಾಂಗಭೇದದ ದೌರ್ಜನ್ಯಕ್ಕೆ ತಮ್ಮ ಲೇಖನಿಯ ಮೂಲಕ ದನಿಯಾದವರು. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ರ‍್ಯಾಂಡಮ್ ಬುಕ್‌ಹೌಸಿನಲ್ಲಿ ಸಂಪಾದಕಿಯಾಗಿ ಹೀಗೆ ವಿವಿಧೆಡೆ ಕೆಲಸ ಮಾಡಿದ್ದಾರೆ. ಗುಲಾಮಗಿರಿ, ವರ್ಣಭೇದದ ನೋವು–ತಾರತಮ್ಯ ಇವರ ಕೃತಿಗಳ ವಸ್ತು. ಸಾಹಿತ್ಯಕ್ಕಾಗಿನ ಪುಲಿಟ್ಜರ್, ನೊಬೆಲ್‌ನಂತಹ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದ್ದಾರೆ.

**The Bluest Eye, Sula, Song of Solmon, Beloved, Jazz, Paradaise ಅವರ ಕೆಲವು ಕಾದಂಬರಿಗಳು. The Big Box, The Book of Mean People, Please, Louise, Little Cloud and Lady Wind ಅವರ ಕೆಲವು ಮಕ್ಕಳ ಪುಸ್ತಕಗಳು.**

**‘ದ ಪ್ಯಾರಿಸ್ ರಿವ್ಯೂ’ ಪತ್ರಿಕೆಯ 1993ರ ಸಂಚಿಕೆಯಲ್ಲಿ ಪ್ರಕಟವಾದ ಸಂದರ್ಶನದ ಆಯ್ದ ಭಾಗಗಳು ಇಲ್ಲಿವೆ.**

◆ **ಹೊತ್ತು ಹುಟ್ಟುವುದಕ್ಕೂ ಮುಂಚೆ ನೀವು ಬರೆಯುತ್ತೀರಿ ಅಂತೊಮ್ಮೆ ಹೇಳಿದ್ದಿರಿ. ಇದಕ್ಕೆ ಏನಾದರೂ ಕಾರಣಗಳಿವೆಯಾ ಅಥವ ಮುಂಜಾನೆ ಬರೆಯುವುದು ನಿಮಗೆ ಇಷ್ಟವೋ?**

ನನ್ನ ಮಕ್ಕಳು ಚಿಕ್ಕವರಿದ್ದಾಗ ಅವರು ಏಳುವುದಕ್ಕೆ ಮುಂಚೆ ಬರೆದು ಮುಗಿಸಬೇಕಿತ್ತು. ಹಾಗಾಗಿ, ಮುಂಜಾನೆ ಐದು ಗಂಟೆಗೆ ಕೂರುತ್ತಿದ್ದೆ. ರ‍್ಯಾಂಡಮ್ ಹೌಸಿನಲ್ಲಿ ಕೆಲಸ ಬಿಟ್ಟ ಮೇಲೆ ಕೆಲವು ವರ್ಷಗಳ ಕಾಲ ಮನೆಯಲ್ಲೇ ಉಳಿದೆ. ಆಗ ಮೊದಲು ನಾನು ಗಮನಿಸದೆ ಬಿಟ್ಟಿದ್ದ ಸಂಗತಿಗಳು ಗಮನಕ್ಕೆ ಬರಲಾರಂಭಿಸಿದವು. ಕೆಲಸಕ್ಕೆ ಹೋಗುತ್ತಿದ್ದಾಗ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ರಾತ್ರಿ ಊಟ ಇವನ್ನೆಲ್ಲ ಟೈಂ ಟೇಬಲ್ ರೀತಿ ಮಾಡುತ್ತಿದ್ದೆನೆ ಹೊರತು, ನನಗೆ ತಿನ್ನಬೇಕು ಅನ್ನಿಸಿದಾಗಲ್ಲ. ನನ್ನೆಲ್ಲ ಅಭ್ಯಾಸಗಳು ಕೆಲಸ, ಮಕ್ಕಳ ಕಾರಣದಿಂದ ಹುಟ್ಟಿಕೊಂಡಿದ್ದವು. ವಾರದ ದಿನಗಳಲ್ಲಿ ನಮ್ಮ ಮನೆಯ ಸುತ್ತಲ ಸದ್ದುಗಳು ಹೇಗಿದ್ದವು ಅಂತ ಗೊತ್ತಿರಲಿಲ್ಲ. ಇದೇನಿದು ಹೀಗೆಲ್ಲ ಇದೆಯಾ ಅನ್ನಿಸಿತ್ತು.

1982ರಲ್ಲಿ ‘Beloved’ ಬರೆಯಲು ಶುರು ಮಾಡಿದ್ದೆ. ಮುಂಜಾನೆ ನನ್ನಲ್ಲಿ ಹೆಚ್ಚು ಸ್ಪಷ್ಟತೆ, ಆತ್ಮವಿಶ್ವಾಸ, ಕ್ರಿಯಾಶೀಲತೆ ಇರುತ್ತದೆ ಅನ್ನಿಸಿತು. ಮಕ್ಕಳು ಚಿಕ್ಕವರಿದ್ದಾಗ ಬೇಗ ಏಳುವ ಅಭ್ಯಾಸ ಮಾಡಿಕೊಂಡಿದ್ದು ಈಗ ನನ್ನ ಆಯ್ಕೆಯಾಯಿತು. ಹೊತ್ತು ಹುಟ್ಟಿದ ಮೇಲೆ ನನ್ನಲ್ಲಿನ ಉತ್ಸಾಹ, ಕ್ರಿಯಾಶೀಲತೆ ಕಡಿಮೆಯಾಗುತ್ತದೆ.

ಇತ್ತೀಚೆಗೆ ಲೇಖಕಿಯೊಬ್ಬಳೊಂದಿಗೆ ಮಾತಾಡುತ್ತಿರುವಾಗ ಆಕೆ ತಾನು ಬರೆಯಲು ಕಂಪ್ಯೂಟರ್ ಕೀಬೋರ್ಡ್ ಮುಟ್ಟುವುದಕ್ಕೆ ಮುಂಚೆ ಮೇಜಿನ ಮೇಲೆ ಏನನ್ನೋ ಮುಟ್ಟುತ್ತೇನೆ ಅಂತ ಹೇಳಿದಳು. ಅದೇನು ಅನ್ನೋದು ನೆನಪಿಲ್ಲ. ಆಗ ನಾವು ಬರೆಯುವ ಮುಂಚಿನ ಅಭ್ಯಾಸಗಳ ಕುರಿತು ಮಾತಾಡುತ್ತಿದ್ದೆವು. ಆ ತರಹ ನಾನೇನು ಮಾಡ್ತೀನಿ ಅಂತ ಯೋಚಿಸಿದಾಗ ‘ಇನ್ನೂ ಕತ್ತಲಿರುವಾಗಲೇ ಎದ್ದು ಕಾಫಿ ಮಾಡಿಕೊಂಡು ಕುಡಿಯುತ್ತಾ ಬೆಳಕು ಹರಿಯುವುದನ್ನು ನೋಡುತ್ತಿದ್ದೆ’ ಎನ್ನುವುದು ನೆನಪಾಗಿ ಹೇಳಿದೆ. ಆ ಅಭ್ಯಾಸ ಒಂದು ರೀತಿಯಲ್ಲಿ ಬರವಣಿಗೆಯ ನನ್ನ ಸ್ಪೇಸ್‌ನ ಒಳಹೊಕ್ಕು